ಬಿ.ಆರ್. ಉಷಾ, ಕೆನಡ
ಸರ್ಕಾರಿ ಕೆಲಸ ದೇವರ ಕೆಲಸ ಅಂದರೇನು?




ನೈವೇದ್ಯ ಇಟ್ಟರೆ ಅಥವಾ ಮಂಗಳಾರತಿ ಮಾಡಿದರೆ ಪ್ರಸಾದ ದೊರಕುವುದೆಂದು.

ಮಲ್ಲಿಕಾರ್ಜುನ, ಸುರಧೇನುಪುರ
ಕೆಲವು ಸರ್ಕಾರಿ ಕಚೇರಿಗಳು ಟೈಮ್ ಆದರೂ ಕಾರ್ಯ ನಿರ್ವಹಿಸುವುದರ ಗುಟ್ಟೇನು?
ದೀಪ ಹಚ್ಚುವ ಸಮಯದಲ್ಲಿ ಲಕ್ಷ್ಮಿ ಬರುತ್ತಾಳೆಂಬ ದೃಢ ನಂಬಿಕೆ.

ಮಂಡಿ ಕುಮಾರ್, ಬೆಂಗಳೂರು
ಮದುವೆ, ಮಕ್ಕಳು, ಸಂಸಾರ, ಜೀವನ ಎಲ್ಲವೂ ಮೂರಕ್ಷರ; ಸಾವು ಎರಡೇ ಅಕ್ಷರ. ಏಕೆ?
ಎರಡಕ್ಷರ ಲಗ್ನ, ಸುತಾ:, ಗೃಹ, ಆಯು; ಮೂರಕ್ಷರ ಮರಣ. ನಮ್ಮ ನಮ್ಮ ಮನಸಿಗೆ ನಮ್ಮ ನಮ್ಮ ಲೆಕ್ಕ.

ಮೋಹನರಾಜು, ಎಸ್.ಎ. ಶಂಕರಘಟ್ಟ
ಮಾತೃವಾಕ್ಯ ಪರಿಪಾಲನೆ ಮಾಡಲೋ, ಹೆಂಡತಿಯ ಮಾತನ್ನು ಪಾಲಿಸಲೋ?



ಸರ್ಕಸ್‌ನ ಪ್ರಾಣಿಗೆ ರಿಂಗ್ ಮಾಸ್ಟರನ್ನು ಆರಿಸುವ ಹಕ್ಕಿಲ್ಲ.

ಬಿ.ವಿ. ಸುರೇಶ್, ಬೆಂಗಳೂರು
ಈ ಪುರುಸೊತ್ತು ಎಲ್ಲಿ ಸಿಗುತ್ತದೆ?
ಸಣ್ಣ ಅಪಘಾತ ನಡೆದ ಸ್ಥಳದಲ್ಲಿ ಸುತ್ತುವರಿದ ಜನರಿಗೆ ಪುರುಸೊತ್ತೇ ಪುರುಸೊತ್ತು.

ಜಗದೀಶ ಬಿ. ಹೊಸೂರು, ಮೈಸೂರು
ಪತಿವ್ರತೆ ಎನ್ನುವಂತೆ ಪತ್ನೀವ್ರತ ಎನ್ನದೆ ಏಕಪತ್ನೀವ್ರತಸ್ಥ ಎನ್ನುವುದೇಕೆ?
ಎಂಟು ಆಪ್ಷನ್ (ಅಷ್ಟಮಹಿಷಿ) ಇದ್ದೂ ಒಂದೇ ಆರಿಸಿದನೆಂದು. ಅವಳಿಗಿದ್ದದ್ದೇ ಸಿಂಗಲ್ ಆಪ್ಷನ್.

ಪಿ. ಶಂಕರಪ್ಪ, ಶಿವಮೊಗ್ಗ
ಲಂಚದ ಬೇಲಿಯು ಆಡಳಿತದ ಹೊಲವನ್ನು ಹಾಳುಮಾಡುತ್ತಿರುವ ಪರಿಸ್ಥಿತಿಯನ್ನು ಯಾರು ನಿಲ್ಲಿಸಬಹುದು?
ಪ್ರಶ್ನಿಸಲು ಸಮರ್ಥರಾದ, ಸ್ವಯಂ ಮಾರಾಟಕ್ಕಿಲ್ಲದ, ದೇಶಭಕ್ತ ಕಾನೂನುತಜ್ಞರು, ಅಂಥವರಿದ್ದರೆ!

ಎನ್. ವೈದೇಹಿ, ಮೈಸೂರು
ಬಾಲನಟರು ಬಾಲಕಾರ್ಮಿಕರಲ್ಲವೆ? ಅವರಿಗೆ ಬಾಲಕಾರ್ಮಿಕರ ಕಾನೂನುಗಳು ಅನ್ವಯಿಸುವುದಿಲ್ಲವೆ?
ಊಹೂಂ. ಹೇರಿದ್ದು ಕೆಲಸ; ಆರಿಸಿಕೊಂಡದ್ದು ಕ್ರೀಡೆ/ವಿದ್ಯೆ/ಟ್ರೈನಿಂಗ್.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಚಾಕುವನ್ನು ಹರಿತಗೊಳಿಸುವುದಕ್ಕೂ, ಮನಸ್ಸನ್ನು ಹರಿತಗೊಳಿಸುವುದಕ್ಕೂ ವ್ಯತ್ಯಾಸ?
ಒಮ್ಮೆ ಹರಿತಗೊಂಡ ಮನಸ್ಸು ಮತ್ತೆ ಮೊಂಡಾಗದು.

ಬಿ. ಚಂದ್ರೇಗೌಡ, ಬೆಂಗಳೂರು
ಗೀಳು ಗಾಳವಾಗದಂತೆ ನೋಡಿಕೊಳ್ಳುವುದು ಹೇಗೆ?
ಗೀಳಿಗೆ ಕೋಳ ತೊಡಿಸಿ.

ಕುಂಬಾರಸ್ವಾಮಿ, ಹಾಸನ
ನಟಭಯಂಕರನೊಬ್ಬ ತೆರೆಯ ಹಿಂದೆ ಬಿಕ್ಕಿ ಬಿಕ್ಕಿ ಅತ್ತರೆ ಅದು ಅಭಿನಯವೋ, ನೈಜವೋ?
ನಿರ್ಮಾಪಕ ಹಣ ಕೊಡದೆ ಕೈಯೆತ್ತಿದ್ದಾನೆಂಬುದರ ನೈಜ ಸೂಚನೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಎಳೆ ಬಿಸಿಲಿನಲ್ಲಿ ವಿಟಮಿನ್‌ಗಳು ಎಲ್ಲಿ ಅಡಗಿರುತ್ತವೆ?
ಸೂರ್ಯನ ಗೋಡೌನ್‌ನಲ್ಲೇ – ಕಿರಣಗಳು ಅವುಗಳ ಡೆಲಿವರಿ ಬಾಯ್ಸ್.

ಪೆಮ್ಮನಹಳ್ಳಿ ಚಿಕ್ಕಣ್ಣ, ಪಾವಗಡ
ಮುದ್ದಿನ ಮಡದಿ ರೇಗಿಸಿದಾಗ ನಾ ಏನು ಮಾಡಲಿ?
ಕಿರುನಗೆ ಬೀರಿ; ರೇಗು–ಯಾಗಕ್ಕೆ ಹುಸಿನಗೆಯ ಆಜ್ಯ ಸೇರಿದರೆ ಶುಭಫಲ ನಿಶ್ಚಿತ.

## ವಾರದ ಪ್ರಶ್ನೆ

ಎಂ.ಸಿ. ಧನ್ಯತಾ, ಬೆಂಗಳೂರು
ಈ ವಿಭಾಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕನಿಷ್ಠ ಪ್ರಮಾಣದಲ್ಲಿರುವುದು ಏನನ್ನು ಸೂಚಿಸುತ್ತದೆ?
ಮಹಿಳೆಯರು ಅಜ್ಞಾತ ವ್ಯಕ್ತಿಗಳೊಡನೆ ವ್ಯವಹರಿಸಲು ಬಯಸುವುದಿಲ್ಲವೆಂದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಭಕ್ತರು ದೇವರ ಗುಡಿಯಲ್ಲಿ ಗಂಟೆ ಹೊಡೆಯುತ್ತಾರೆ. ರಾಜಕೀಯ ನಾಯಕರು?
ಸಿಕ್ಕಸಿಕ್ಕಲ್ಲಿ ಪರಸ್ಪರರ ಮೇಲೆ ಗಂಟೆಗಂಟೆಗೂ ಹೊಡೆದುಕೊಳ್ಳುತ್ತಾರೆ.

ಅಮರಯ್ಯ ಪತ್ರಿಮಠ, ಶೋರಾಪುರ
ಈ ಜಗತ್ತಿನಲ್ಲಿ ನಿರ್ಮಲವಾದದ್ದು ಯಾವುದು?
ಜಾತಿ ಮತ ಪಂಥ ಲಿಂಗಗಳ ತಾರತಮ್ಯವಿರದ ಈ ಅಂಕಣ.

ಮಹಾವೀರ ಕಾಸರ, ಶಿವಮೊಗ್ಗ
ಪಂಚಭೂತಗಳೂ ಅಲ್ಲಿ ಇರುವಾಗ ಮದುವೆಯಲ್ಲಿ ಅಗ್ನಿಯನ್ನು ಮಾತ್ರ ಸಾಕ್ಷಿ ಮಾಡುವುದೇಕೆ?



ಜಲ ಅಧೋಮುಖಿ. ಭೂ/ನಭ ಕೈಗೆಟುಕದ ವಿಸ್ತಾರ; ವಾಯು ಚಂಚಲ; ಊರ್ಧ್ವಮುಖಿ ಅನಲವೇ ಬೆಸ್ಟು.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
ಹೆಂಡತಿಯ ಮಾತು ಹೇಗಿರಬೇಕು?
ಕೇಳುವಂತೆ, ಕೇಳಿಸುವಂತೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಒಂದು ಸರ್ವಜಾತಿಯ ಮಠ ಸ್ಥಾಪಿಸುವ ಐಡಿಯಾ ಹೊಳೆದಿದೆ ಸಾರ್. ಬಿಸಿನೆಸ್ ಪರವಾಗಿಲ್ವಾ?
ನೋ ಬಿಸಿನೆಸ್. ಅಧ್ಯಕ್ಷಪೀಠ ಯಾವ ಜಾತಿಯವನಿಗೆ ನೀಡಬೇಕು ಎಂದೇ ತೀರ್ಮಾನವಾಗುವುದಿಲ್ಲ.

■ ರಾಮ್